# ಬಿ ಪಾಸಿಟಿವ್ ಕ್ಯಾನ್ಸರ್ ಗೆಲ್ಲಬಹುದು!

ಅರವತ್ತಾರು ವರ್ಷದ ಮಾಲಾ ಪಾಟೀಲ್ ವಿಪರೀತ ಮಂಡಿನೋವಿನ ಕಾರಣ ವೈದ್ಯರನ್ನು ಭೇಟಿಯಾದರು. ಇವರನ್ನು ತಪಾಸಣೆ ನಡೆಸಿದ ಡಾಕ್ಟರ್, ಈ ಹಂತದಲ್ಲಿ ನೋವಿನ ಸಂಪೂರ್ಣ ಉಪಶಮನಕ್ಕೆ ಶಸ್ತ್ರಚಿಕಿತ್ಸೆಯೊಂದೇ ದಾರಿ ಎಂದು ತಿಳಿಸಿದರು. ವೈದ್ಯರ ಸಲಹೆಯಂತೆ ಮಂಡಿನೋವು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಂತೆ ಧುತ್ತೆಂದು ಬಂದೆರಗಿತ್ತು ಮತ್ತು ಭಯಾನಕ ಕಾಯಿಲೆ. ಅದೇ ಸ್ತನ ಕ್ಯಾನ್ಸರ್ ಎಂಬ ಭೂತ ಬೆನ್ನತ್ತಿರುವುದು. ಕ್ಯಾನ್ಸರ್ ಮೊದಲನೆ ಹಂತದಲ್ಲಿ ಇದೆ ಎಂದು ಗುಳಿಗೆ ನೀಡಿದರು. ನಾಲ್ಕು ವರ್ಷಗಳ ಬಳಿಕ ಸ್ತನವನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆದು ಹಾಕಲಾಯಿತು. 2022ರಿಂದ ಪ್ರತಿ ತಿಂಗಳೂ ಇಂಜೆಕ್ಷನ್ ತೆಗೆದುಕೊಳ್ಳುತ್ತಿದ್ದೇನೆ. ಕಾಯಿಲೆ ಜೊತೆ ಹೋರಾಟ ಮಾಡುತ್ತಲೇ ಇಳಿವಯಸ್ಸಿನಲ್ಲಿ ಬದುಕಿನ ಕ್ಷಣಗಳನ್ನು ಅನುಭವಿಸುತ್ತಿದ್ದೇನೆ' ಎಂದು ಅಳಲು ತೋಡಿಕೊಂಡರು.

***

ಇದು ಎರಡು ವರ್ಷ ಹಿಂದಿನ ಕಥೆ. ಒಮ್ಮೆ ಇದ್ದಕ್ಕಿದ್ದ ಹಾಗೇ ಜೋರು ಬೆವರು ಬಂತು. ತಕ್ಷಣ ಆಸ್ಪತ್ರೆಗೆ ಹೋದೆ. ವೈದ್ಯರು ತಪಾಸಣೆ ಮಾಡಿದಾಗ ಹೃದಯದ ಸಮಸ್ಯೆ ಏನೂ ಇಲ್ಲ. ಇದು ಹೊಟ್ಟೆ ಉಬ್ಬರಿಸಿದ ಹಾಗಾಗಿದೆ ಅಷ್ಟೆ ಎಂದರು. ಅಸಿಡಿಟಿ ಇರಬೇಕು, ಒಮ್ಮೆ ಎಂಡೋಕ್ರೈನಾಲಜಿಸ್ಟ್ ಅವರನ್ನು ನೋಡಿ ಎಂದೂ ಸಲಹೆ ನೀಡಿದರು. ಹಾಗೆ ಎಂಡೋಕ್ರೈನಾಲಜಿಸ್ಟ್ ಅವರನ್ನು ಭೇಟಿಯಾದೆ. ಎಲ್ಲ ಚೆಕ್ ಅಪ್ ಮಾಡಿದಾಗ ಹೊಟ್ಟೆಯೊಳಗೆ ನಾಲ್ಕನೇ ಹಂತಕ್ಕೆ ಹೋಗಿರುವ ಕ್ಯಾನ್ಸರ್ ಟ್ಯೂಮರ್ ಪತ್ತೆಯಾಯಿತು. ಅದಾಗಿ ಕ್ಯಾನ್ಸರ್‌ಗೆ ಚಿಕಿತ್ಸೆ ಶುರುವಾಯಿತು. ಇಷ್ಟಾದರೂ ನಾನು ಕೂಲ್ ಆಗಿಯೇ ಇದ್ದೆ. ಕ್ಯಾನ್ಸರ್ ಅನ್ನು ಗೆದ್ದು ಬರಬಲ್ಲೆ ಎಂಬ ಅದಮ್ಯ ಆತ್ಮವಿಶ್ವಾಸ, ಧೈರ್ಯ ಬೆಳೆಸಿಕೊಂಡೆ. ಸರ್ಜರಿ ಮೂಲಕ ಗಡ್ಡೆ ತೆಗೆಸಿದ್ದಾಯಿತು. ಹೋರಾಟ ಇನ್ನೂ ಮುಂದುವರಿದಿದೆ. ಆದರೆ ಸಾವಿನ ದವಡೆಯಿಂದ ಪಾರಾಗಿದ್ದೇನೆ. ಇದಕ್ಕೆ ವೈದ್ಯರ, ಕುಟುಂಬದ, ಸ್ನೇಹಿತರ ಬೆಂಬಲ ಬೇಕೇಬೇಕು. ಅಲ್ಲದೆ ಈಗ ವೈದ್ಯಕೀಯ ತಂತ್ರಜ್ಞಾನ ಬಹಳ ಮುಂದುವರಿದಿದೆ. ಹೆದರುವ ಅವಶ್ಯಕತೆ ಇಲ್ಲ. ಪಾಸಿಟಿವ್ ಥಿಂಕಿಂಗ್ ಬಹಳ ಮುಖ್ಯ' ಎಂದು ಕ್ಯಾನ್ಸರ್ ಗೆದ್ದುಬಂದಿರುವ ನೀಲಿಮಾ ರಾಜು ತಮ್ಮ ಅನುಭವ ಹಂಚಿಕೊಂಡರು.

***

ಸ್ತನ ಕ್ಯಾನ್ಸರ್‌ಗೊಳಗಾಗಿ ಸಂಪೂರ್ಣವಾಗಿ ಗುಣಮುಖರಾಗಿ ಮರಳಿ ಕರ್ತವ್ಯಕ್ಕೆ ಹಾಜರಾದ ಅರ್ಚನಾ ರಾವ್ ಅವರದ್ದು ಮತ್ತೊಂದು ಕಥೆ. ಈ ವರ್ಷದ ಜನವರಿ ತಿಂಗಳಲ್ಲಿ ಸ್ತನ ಕ್ಯಾನ್ಸರ್ ಪತ್ತೆಯಾಯಿತು. ಸ್ತನದಲ್ಲಿ ಎಂಥದ್ದೋ ವಿಚಿತ್ರ ದ್ರವ ಒಸರುತ್ತಿತ್ತು. ಡಾಕ್ಟರ್ ಹತ್ತಿರ



**ಕ್ಯಾನ್ಸರ್ ಬಂದರೆ ಅಂಜುತ್ತಾ, ಅಳುಕುತ್ತಾ, ಮಾನಸಿಕವಾಗಿ ಕುಗ್ಗುತ್ತಾ ಕೂರುವ ಕಾಲ ಇದಲ್ಲ. ಧನಾತ್ಮಕ ಚಿಂತನೆ ನಡೆಸಿ, ಈ ಪಯಣದಲ್ಲಿ ಗೆದ್ದೇ ಗೆಲ್ಲುವೆ ಎಂಬ ಆತ್ಮವಿಶ್ವಾಸ ಬೆಳೆಸಿಕೊಂಡು ಸೂಕ್ತ ಚಿಕಿತ್ಸೆಯನ್ನು ಪಡೆದುಕೊಂಡರೆ ಖಂಡಿತಾ ಗೆಲುವನ್ನು ಸಾಧಿಸಲು ಸಾಧ್ಯವಿದೆ.**

**ಉಮಾ ಅನಂತ್**